UASB LIBRARY
Jai Kisan
Newspaper Clippings
Saturday 25-02-2023
Pg. 1

ಸಿರಿಧಾನ್ಯ ಉತ್ಕೃಷ್ಟತಾ ಕೇಂದ್ರ ಅಭಿವೃದ್ಧಿ

ಏಷ್ಯಾ ಖಂಡಕ್ಕೆ ಶೇ.80ರಷ್ಟು ಸಿರಿಧಾನ್ಯ ಭಾರತದಿಂದ ಪೂರೈಕೆ

■ ರವಿಕುಮಾರ ಬೆಟ್ಟದಪುರ ಬೆಂಗಳೂರು
ravi.kumar6@timesgroup.com

ಸಿರಿಧಾನ್ಯ ಬೆಳೆಯಲು ರೈತರನ್ನು ಉತ್ತೇಜಿಸುವ ದೃಷ್ಟಿಯಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಸ್ಥಾಪಿಸಿರುವ ಸಿರಿಧಾನ್ಯ 'ಉತ್ಕೃಷ್ಟತಾ ಕೇಂದ್ರ'ವನ್ನು ಅಭಿವೃದ್ಧಿಗೊಳಿಸಲು ವಿವಿ ಆಡಳಿತ ಮಂಡಳಿ ಎಲ್ಲ ರೀತಿಯ ಕ್ರಮ ಕೈಗೊಂಡಿದೆ. ಜತೆಗೆ ಸಿರಿಧಾನ್ಯಗಳಿಂದ ತಯಾರಿಸಿದ ಪದಾರ್ಥಗಳ ಮಾರಾಟ ಮಳಿಗೆಯನ್ನು ತೆರೆಯಲು ಕೂಡ ಚಿಂತಿಸಿದೆ.

ಕಳೆದ ಆರು ವರ್ಷಗಳ ಹಿಂದೆ ಇಡೀ ರಾಜ್ಯದಲ್ಲೇ ಮೊದಲ ಬಾರಿಗೆ ಸ್ಥಾಪಿತವಾದ ಸಿರಿಧಾನ್ಯ ಉತ್ಕೃಷ್ಟತಾ ಕೇಂದ್ರ ಇದಾಗಿದೆ. ಇಲ್ಲಿ ತಳಿ ಸಂಶೋಧನೆ, ಮೌಲ್ಯವರ್ಧನೆ, ರೈತರಿಗೆ ತರಬೇತಿ ಹಾಗೂ ಮಾರುಕಟ್ಟೆಯ ಬಗ್ಗೆ ತರಬೇತಿ ನೀಡಲಾಗುತ್ತಿತ್ತು. ಇತ್ತೀಚಿನ ಕೆಲ ವರ್ಷಗಳಿಂದ ಉತ್ಕೃಷ್ಟತಾ ಕೇಂದ್ರದ ಬಗ್ಗೆ ರೈತರಿಗೆ ಮಾಹಿತಿ ದೊರೆಯದೆ ಗೌಣವಾಗಿತ್ತು. ಪ್ರತಿ ವರ್ಷ ಸಿರಿಧಾನ್ಯ ಮೇಳದ ಸಮಯದಲ್ಲಿ ಮಾತ್ರ ರೈತರಿಗೆ ತರಬೇತಿ ನೀಡಲಷ್ಟೇ ಸೀಮಿತವಾಗುತ್ತಿತ್ತು. ಈಗ ವರ್ಷದ ಎಲ್ಲ ಕಾಲದಲ್ಲೂ ರೈತರಿಗೆ ತರಬೇತಿ ನೀಡಲು ಚಿಂತಿಸಲಾಗಿದೆ. ರೈತರ ಕೋರಿಕೆ ಮೇರೆಗೆ ಸಿರಿಧಾನ್ಯಗಳ ಬಿತ್ತನೆ ಬೀಜೋತ್ಪನ್ನಗಳನ್ನು ಹೆಚ್ಚಿಸಲು ಸಮಿತಿ ರಚಿಸಲಾಗಿದೆ.

ಜಿಕೆವಿಕೆ ವ್ಯಾಪ್ತಿಯಲ್ಲಿರುವ 10 ಜಿಲ್ಲೆಗಳಲ್ಲೂ ಸಿರಿಧಾನ್ಯ ಬೆಳೆಯ ಕುರಿತು ತರಬೇತಿ ಆಯೋಜಿಸಲಾಗುತ್ತದೆ. ಪ್ರಾತ್ಯಕ್ಷಿಕೆ ಮೂಲಕ ಸಿರಿಧಾನ್ಯ ಬಿತ್ತನೆ ಬೀಜ, ಬಿತ್ತನೆ ಮಾಡುವುದು, ಬೆಳೆಯುವುದು ಹಾಗೂ ಮಾರುಕಟ್ಟೆ ಸೇರಿದಂತೆ ಅದರ ಉಪಯುಕ್ತತೆ ಬಗ್ಗೆಯೂ ಕಾರ್ಯಾಗಾರ ಮಾಡಲಾಗುತ್ತಿದೆ. ಇದರ ಭಾಗವಾಗಿಯೇ ಮಾರ್ಚ್ 11ರಂದು ಮಂಡ್ಯದಲ್ಲಿ ಸಿರಿಧಾನ್ಯ ಸಂತೆ ಆಯೋಜಿಸಲಾಗಿದೆ ಎಂದು ಕೃಷಿ ವಿವಿ ಕುಲಪತಿ ಎಸ್.ವಿ. ಸುರೇಶ್ ತಿಳಿಸಿದರು.



170 ಲಕ್ಷ ಟನ್ ಉತ್ಪಾದನೆ

ಭಾರತದಲ್ಲಿ ಪ್ರಸಕ್ತ ಹಂಗಾಮಿನಲ್ಲಿ 170 ಲಕ್ಷ ಟನ್ ಸಿರಿಧಾನ್ಯ ಉತ್ಪಾದನೆ ಮಾಡಲಾಗಿದೆ. ಕರ್ನಾಟಕದಲ್ಲಿ 16.39 ಲಕ್ಷ ಹೆಕ್ಟೇರ್‌ನಲ್ಲಿ 20.55 ಲಕ್ಷ ಟನ್ ಸಿರಿಧಾನ್ಯ ಉತ್ಪಾದನೆ ಮಾಡಲಾಗಿದೆ. ಇದರಿಂದ ಏಷ್ಯಾಖಂಡಕ್ಕೆ ಶೇ.80ರಷ್ಟು ಸಿರಿಧಾನ್ಯವನ್ನು ಭಾರತವೇ ಪೂರೈಸುತ್ತಿದೆ. ಪ್ರಪಂಚಕ್ಕೆ ಶೇ.20ರಷ್ಟು ಸರಬರಾಜು ಮಾಡುತ್ತಿದೆ. ಇಡೀ ವಿಶ್ವದಲ್ಲಿ 131 ದೇಶಗಳು ಸಿರಿಧಾನ್ಯ ಬೆಳೆಯುತ್ತಿವೆ. 59 ಕೋಟಿ ಆಫ್ರಿಕ ಮತ್ತು ಏಷ್ಯಾಖಂಡದ ಜನರು ಸಿರಿಧಾನ್ಯಗಳ ಮೇಲೆ ಅವಲಂಬಿತರಾಗಿದ್ದಾರೆ ಎಂದು ಕೃಷಿ ವಿವಿ ಅಂಕಿ ಅಂಶ ನೀಡಿದೆ.

2021ರಲ್ಲಿ ಉತ್ಪಾದನೆ ಪ್ರಮಾಣ

ಭಾರತದಲ್ಲಿ 11.59 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 19.98 ಲಕ್ಷ ಟನ್ ರಾಗಿ ಉತ್ಪಾದನೆ ಮಾಡಲಾಗಿತ್ತು. ಒಂದು ಹೆಕ್ಟೇರ್‌ಗೆ ಸರಾಸರಿ 1724 ಕೆ.ಜಿ. ಉತ್ಪಾದನೆ ಮಾಡಲಾಗಿತ್ತು. ಕರ್ನಾಟಕದಲ್ಲಿ 7.85 ಲಕ್ಷ ಹೆಕ್ಟೇರ್‌ನಲ್ಲಿ 13.69 ಲಕ್ಷ ಟನ್ ಉತ್ಪಾದಿಸಲಾಗಿತ್ತು. ರಾಜ್ಯದಲ್ಲಿ ಒಂದು ಹೆಕ್ಟೇರ್‌ಗೆ ಸರಾಸರಿ 1745 ಕೆ.ಜಿ. ಉತ್ಪಾದನೆ ಮಾಡಲಾಗಿತ್ತು.

ಸಿರಿಧಾನ್ಯಗಳು (ಕಿರುಧಾನ್ಯ) ಉತ್ಪಾದನೆ

ಭಾರತದಲ್ಲಿ **4.44** ಲಕ್ಷ ಹೆಕ್ಟೇರ್‌ನಲ್ಲಿ
3.47 ಲಕ್ಷ ಟನ್

ಕರ್ನಾಟಕದಲ್ಲಿ **0.26** ಲಕ್ಷ ಹೆಕ್ಟೇರ್‌ನಲ್ಲಿ
0.20 ಲಕ್ಷ ಟನ್

ಒಂದು ಹೆಕ್ಟೇರ್‌ಗೆ ಸರಾಸರಿ **180** ಕೆ.ಜಿ.

ರಾಷ್ಟ್ರೀಯ ಸಿರಿಧಾನ್ಯ ಶೃಂಗಸಭೆಯ ಅಂಗವಾಗಿ ವಿಶೇಷವಾದ ಸಿರಿಧಾನ್ಯಗಳಿಂದ ತಯಾರಿಸಿದ ಪದಾರ್ಥಗಳನ್ನು ಮಾರಾಟ ಮಾಡಲು ಕೃಷಿ ವಿವಿ ಆವರಣದಲ್ಲಿ ಒಂದು ವಿಶೇಷ ಮಳಿಗೆ ತೆರೆಯಲಾಗುವುದು. ಈಗಾಗಲೇ ಸಿರಿಧಾನ್ಯಗಳ ಮಾರಾಟದ ಮಳಿಗೆ ಕ್ಯಾಂಪಸ್‌ನಲ್ಲಿದೆ. ಸಿರಿಧಾನ್ಯದ ಬೀಜೋತ್ಪನ್ನ ಪ್ರಮಾಣ ಹೆಚ್ಚಿಸಲು ಚಿಂತಿಸಲಾಗಿದ್ದು, ಇದರ ಅಧ್ಯಯನಕ್ಕೆ ಒಂದು ಸಮಿತಿ ರಚಿಸಲಾಗಿದೆ.

-ಡಾ.ಎಸ್.ವಿ. ಸುರೇಶ ಕುಲಪತಿ, ಕೃಷಿ ವಿವಿ ಬೆಂಗಳೂರು

25-02-2023
V-karnataka Pg 01

8 ಮಂದಿ ಪ್ರಗತಿಪರ ರೈತರಿಗೆ ಸನ್ಮಾನ

ಹೆಸರಘಟ್ಟದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮೇಳ | 10 ಸಾವಿರ ಮಂದಿ ಭಾಗಿ

ಬೆಂಗಳೂರು: ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಏರ್ಪಡಿಸಿರುವ ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಶುಕ್ರವಾರ 10 ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

ಮೇಳ ಅಂಗವಾಗಿ ಆಯೋಜನೆಗೊಂಡಿರುವ ತೋಟಗಾರಿಕಾ ತಂತ್ರಜ್ಞಾನ ಕುರಿತ ಕಾರ್ಯಾಗಾರದಲ್ಲಿ 40ಕ್ಕೂ ಹೆಚ್ಚು ಉತ್ಸಾಹಿ ಯುವಕರು ಪಾಲ್ಗೊಂಡಿದ್ದರು. ಸಂಸ್ಥೆಯ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಇತರ ರೈತರಿಗೆ ಮಾದರಿಯಾದ 8 ಪ್ರಗತಿಪರ ರೈತರಿಗೆ ಸನ್ಮಾನ ಏರ್ಪಡಿಸಲಾಗಿತ್ತು. ಚಿತ್ರದುರ್ಗದ ಯುವ ರೈತ ಬಿ. ಮನೋಜ್, ಒಡಿಶಾದ ಸುರೇಶ್‌ಚಂದ್ರ ಓಟಿ, ಆಂಧ್ರದ ರಾಗಿ ಪತಿ ದಾವೆಡು, ಚಿಕ್ಕಬಳ್ಳಾಪುರದ ಅಶ್ವತ್ಥಪ್ಪ, ಸುಧಾಕರ್, ಚಾಮರಾಜನಗರದ ಮಹೇಶ್ ನಾಯಕ್, ಬೆಂಗಳೂರಿನ ಯುವ ಉದ್ಯಮಿ ಸತೀಶ್, ಬಿಜಾಪುರದ ಹಿರಿಯ ರೈತ ಆರ್.ಎಸ್. ಪಾಟೀಲ್ ಮತ್ತಿತರರನ್ನು ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕ ಡಾ.ಎಸ್.ಕೆ. ಸಿಂಗ್ ಮಾತನಾಡಿ, ಸಂಸ್ಥೆಯ ತಂತ್ರಜ್ಞಾನ ದೇಶದುದ್ದಕ್ಕೂ ಪಸರಿಸಲು ಪ್ರಗತಿಪರ ರೈತರ ಶ್ರಮ ಬಹುಮುಖ್ಯವಾಗಿದೆ ಎಂದು ಪ್ರಶಂಶಿಸಿದರು.

ಬೆಂಗಳೂರಿನ ಅಟಾರಿಯ ಪ್ರಧಾನ ವಿಜ್ಞಾನಿ ಡಾ.ಡಿ.ವಿ.ಎಸ್. ರೆಡ್ಡಿ, ಪ್ರಧಾನ ವಿಜ್ಞಾನಿ ಡಾ.ಸಿ.ಕೆ. ನಾರಾಯಣ, ಡಾ.ಪ್ರಕಾಶ್ ಪಾಟೀಲ್ ಮತ್ತಿತರ ಗಣ್ಯರು, ರೈತರು, ನಾಗರಿಕರು, ಮಹಿಳೆಯರು, ವಿದ್ಯಾರ್ಥಿಗಳು ಭಾಗವಹಿಸಿದರು.



ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಏರ್ಪಡಿಸಿರುವ ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಶುಕ್ರವಾರ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ನಿರ್ದೇಶಕ ಡಾ.ಎಸ್.ಕೆ. ಸಿಂಗ್, ಬೆಂಗಳೂರಿನ ಅಟಾರಿಯ ಪ್ರಧಾನ ವಿಜ್ಞಾನಿ ಡಾ.ಡಿ.ವಿ.ಎಸ್. ರೆಡ್ಡಿ, ಪ್ರಧಾನ ವಿಜ್ಞಾನಿ ಡಾ.ಸಿ.ಕೆ. ನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

25-02-2023
Vijayavani Pg 5A

For more information visit
University Library Website
Web - uasbagrilibindia.org
E-mail- librarian@uasbangalore.edu.in

ಹಲವು ದೇಶಗಳಿಂದ ರಫ್ತು ನಿರ್ಬಂಧ | ಜಾಗತಿಕ ಪೂರೈಕೆ ಸರಪಳಿ ಮೇಲೆ ಪ್ರಭಾವ

ಜಾಗತಿಕ ಮಾರುಕಟ್ಟೆಯಲ್ಲಿ ಈರುಳ್ಳಿ ಅಭಾವ

ನವದೆಹಲಿ: ಜಗತ್ತಿನಾದ್ಯಂತ ಅಡುಗೆಗೆ ಅತ್ಯವಶ್ಯ ಪದಾರ್ಥವಾದ ಈರುಳ್ಳಿ ಅಭಾವ ಕಾಡುತ್ತಿದ್ದು ಜಾಗತಿಕ ಆಹಾರ ಬಿಕ್ಕಟ್ಟಿಗೆ ಹೊಸ ಸೇರ್ಪಡೆಯಾಗಲಿದೆ. ಈರುಳ್ಳಿ ಕೊರತೆಯ ಕಾರಣದಿಂದ ಸ್ಥಳೀಯ ಲಭ್ಯತೆ ಖಾತರಿ ಪಡಿಸಲು ಮೊರಾಕ್ಕೊ, ಟರ್ಕಿ, ಖಜಕಸ್ತಾನ್ ಮೊದಲಾದವು ಈರುಳ್ಳಿ ರಫ್ತನ್ನು ನಿರ್ಬಂಧಿಸಿವೆ. ಈ ಪದಾರ್ಥದ ಕಾಳಸಂತೆ ಬಗ್ಗೆ ತನಿಖೆ ನಡೆಸುವಂತೆ ಫಿಲಿಪ್ಪೀನ್ಸ್ ಸರ್ಕಾರ ಆದೇಶಿಸಿದೆ.


ಸಾಂದರ್ಭಿಕ ಚಿತ್ರ

ಈರುಳ್ಳಿ ಕೊರತೆಯ ಬಿಕ್ಕಟ್ಟು ಜಗತ್ತಿನ ಆಹಾರ ಪೌಷ್ಟಿಕತೆ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ಗೋಧಿ ಮತ್ತು ಧಾನ್ಯಗಳ ಬೆಲೆ ಇತ್ತೀಚಿನ ದಿನಗಳಲ್ಲಿ ಇಳಿಕೆಯಾಗಿ ಆಹಾರ ಸೇವನೆ ವಿಚಾರದಲ್ಲಿ ಸ್ವಲ್ಪ ನಿರಾತಂಕದ ಸನ್ನಿವೇಶ ನಿರ್ಮಾಣವಾಗಿತ್ತು. ಆದರೆ ತರಕಾರಿ ಮಾರುಕಟ್ಟೆಯಲ್ಲಿ ಕಂಡುಬಂದಿರುವ ಕೆಲವು ಮಿಶ್ರ ಅಂಶಗಳು ಆರೋಗ್ಯಕರ, ಸುಸ್ಥಿರ ಆಹಾರದ ಬೆನ್ನೆಲುಬನ್ನು ಅಲುಗಾಡಿಸುತ್ತಿದೆ. ಹಲವು ದೇಶಗಳಲ್ಲಿ ಈರುಳ್ಳಿ ಬೆಲೆಗಳು ಗಗನಕ್ಕೇರಿದ್ದು ಹಣದುಬ್ಬರಕ್ಕೆ ಕಾರಣವಾಗುವ ಅಪಾಯವಿದೆ. ಹೀಗಾಗಿ ಈ ತರಕಾರಿಯನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆಯಲು ಅವು ಕ್ರಮಗಳನ್ನು ಕೈಗೊಳ್ಳತೊಡಗಿವೆ.

ಹಲವು ತರಕಾರಿ ದುಬಾರಿ: ಈರುಳ್ಳಿ ಮಾತ್ರವಲ್ಲದೆ ಕ್ಯಾರೆಟ್, ಟೊಮಾಟೊ, ಆಲೂಗಡ್ಡೆ ಮತ್ತು ಸೇಬು ಮುಂತಾದ ತರಕಾರಿ ಹಾಗೂ ಹಣ್ಣು ದುಬಾರಿಯಾಗಿದ್ದು ಜಗತ್ತಿನಾದ್ಯಂತ ಅದರ ಸರಬರಾಜು ಕಡಿಮೆಯಾಗಲಿದೆ ಎಂದು ವಿಶ್ವಸಂಸ್ಥೆ ಮತ್ತು ವಿಶ್ವ ಬ್ಯಾಂಕ್ ಎಚ್ಚರಿಸಿವೆ. ಯುರೋಪ್‌ನಲ್ಲಿ ಅಂಗಡಿಗಳು ಖಾಲಿ ಹೊಡೆಯುತ್ತಿದ್ದು ಬ್ರಿಟನ್‌ನ ಸೂಪರ್ ಮಾರ್ಕೆಟ್‌ಗಳು ಕೆಲವು ತರಕಾರಿ ಮತ್ತು ಹಣ್ಣುಗಳ ಖರೀದಿಗೆ ರೇಷನಿಂಗ್ ಆರಂಭಿಸಿವೆ. ದಕ್ಷಿಣ ಸ್ಪೇಯ್ನ್ ಮತ್ತು ಉತ್ತರ ಆಫ್ರಿಕಾದಲ್ಲಿ ಇಳುವರಿ ಕಡಿಮೆಯಾಗಿದ್ದೇ ಇದಕ್ಕೆ ಕಾರಣವಾಗಿದೆ. ಜಗತ್ತಿನಾದ್ಯಂತ, ತಾಂತ್ರಿಕವಾಗಿ ಒಂದು ಹಣ್ಣು ಆಗಿರುವ ಟೊಮಾಟೋ ನಂತರದಲ್ಲಿ ಅತಿ ಹೆಚ್ಚು ಸೇವನೆಯ ತರಕಾರಿಯ ಸ್ಥಾನವನ್ನು ಈರುಳ್ಳಿ ಪಡೆದುಕೊಂಡಿದೆ. ಆಹಾರದ ಗುಣಮಟ್ಟವು ಆಹಾರ ಭದ್ರತೆ ಮತ್ತು ಪೌಷ್ಟಿಕತೆಯಲ್ಲಿ ಮಹತ್ವದ ಕೊಂಡಿಯಾಗಗಿರುತ್ತದೆ ಎಂದು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ (ಎಫ್‌ಎಒ) ಹಿರಿಯ ಅರ್ಥಶಾಸ್ತ್ರಜ್ಞೆ ಸಿಂಡಿ ಹೊಲೆಮನ್ ಹೇಳಿದ್ದಾರೆ.

512 ಕೆಜಿ ಈರುಳ್ಳಿಗೆ ಸಿಕ್ಕಿದ್ದು 2 ರೂ.!

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ರೈತನೊಬ್ಬ ತಾನು ಬೆಳೆದ ಈರುಳ್ಳಿಯನ್ನು 70 ಕಿಮೀ ದೂರದ ಎಪಿಎಂಸಿಗೆ ತೆಗೆದುಕೊಂಡು ಹೋಗಿ ಮಾರಿದ್ದಕ್ಕೆ ಕೇವಲ 2 ರೂಪಾಯಿ ಗಳಿಸಿದ ವಿಲಕ್ಷಣ ಪ್ರಸಂಗವೊಂದು ವರದಿಯಾಗಿದೆ. ಬರ್ಷಿ ತಾಲೂಕಿನ ಬೊರೊಗಾಂವ್ ಗ್ರಾಮದ ರೈತ, 68 ವರ್ಷದ ರಾಜೇಂದ್ರ ತುಕಾರಾಂ ಚವಾಣ್, ಸೋಲಾಪುರದ ಎಪಿಎಂಸಿಗೆ ತೆರಳಿ ತಾನು ಬೆಳೆದಿದ್ದ 518 ಕೆಜಿ ಈರುಳ್ಳಿಯನ್ನು ಹರಾಜಿನಲ್ಲಿ ಮಾರಿದ್ದ. ಒಂದು ಕೆಜಿಗೆ 1 ರೂಪಾಯಿ ಪ್ರಕಾರ ಖರೀದಿಸಲಾಯಿತಾದರೂ ಆತನಿಗೆ ನೀಡಿದ್ದು ಕೇವಲ 2 ರೂಪಾಯಿ. ಅದೂ ಪೋಸ್ಟ್ ಡೇಟೆಡ್ ಚೆಕ್ ಮೂಲಕ. ವಿವಿಧ ಬಾಬ್ತುಗಳಲ್ಲಿ ಹಣ ಕಳೆದ ನಂತರ 2.49 ರೂಪಾಯಿ ನಿವ್ವಳ ಲಾಭವಾಗಿದ್ದು ಬ್ಯಾಂಕ್ ವ್ಯವಹಾರ ರೌಂಡ್ ಫಿಗರ್‌ನಲ್ಲಿ ನಡೆಯುವುದರಿಂದ 49 ಪೈಸೆಯನ್ನು ಬಿಡಬೇಕಾಗಿದೆ. ಅದನ್ನು ಬೇಕಿದ್ದರೆ ನೇರವಾಗಿ ವರ್ತಕನಿಂದ ಪಡೆಯಬಹುದೆಂದು ಸೂಚಿಸಲಾಗಿದೆ.

25-02-2023
Vijayavani Pg 09

ಕೊನೆದಿನ 25-30 ಸಾವಿರ ಮಂದಿ ನಿರೀಕ್ಷೆ | ರೈತರ ಗಮನ ಸೆಳೆದ ಸೌತೆ

ತೋಟಗಾರಿಕೆ ಮೇಳಕ್ಕೆ ಇಂದು ತೆರೆ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesgroup.com

ನಗರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ತೋಟಗಾರಿಕೆ ಮೇಳಕ್ಕೆ ಜನರು ಶುಕ್ರವಾರ ನಿರೀಕ್ಷೆಗೂ ಆಗಮಿಸಿದ್ದು, ಕೃಷಿ ಚಟುವಟಿಕೆಯಲ್ಲಿ ತೊಡುವುದಕ್ಕೆ ಹೆಚ್ಚಿನ ಆಸಕ್ತಿ ತೋರುತ್ತಿರುವುದು ಕಂಡುಬಂದಿದೆ.

ಮೇಳಕ್ಕೆ ಮೂರು ದಿನಗಳಲ್ಲಿ ಸುಮಾರು 30 ಸಾವಿರ ಮಂದಿ ಭೇಟಿ ನೀಡಿದ್ದಾರೆ. ಶನಿವಾರ ಮೇಳಕ್ಕೆ ತೆರೆ ಬೀಳಲಿದ್ದು, ವಾರಾಂತ್ಯವಾದ್ದರಿಂದ ಕೊನೆಯ ದಿನ ಸುಮಾರು 25 ರಿಂದ 30 ಸಾವಿರ ಮಂದಿ ಆಗಮಿಸುವ ನಿರೀಕ್ಷೆಯಿದೆ. ಮೇಳಕ್ಕೆ ಆಗಮಿಸುವವರಿಗೆ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ, ಕೆ.ಬಿ. ಕ್ರಾಸ್‌ನಿಂದ ಐಐಎಚ್‌ಆರ್ ಕ್ಯಾಂಪಸ್‌ನೊಳಗೆ ಬರಲು ವಾಹನದ ವ್ಯವಸ್ಥೆ ಮಾಡಲಾಗಿದೆ. ಕೊನೆಯ ದಿನ ಐಟಿ ಉದ್ಯೋಗಿಗಳು, ವಿದ್ಯಾರ್ಥಿಗಳು ಹೆಚ್ಚಾಗಿ ಬರುವ ಸಾಧ್ಯತೆಗಳಿವೆ ಎನ್ನುತ್ತಾರೆ ರಾಷ್ಟ್ರೀಯ ತೋಟಗಾರಿಕೆ ಮೇಳ-23ರ ಪ್ರಚಾರ ಸಮಿತಿ ಅಧ್ಯಕ್ಷ ಡಾ. ಪಿ.ನಂದೀಶ.

ಮೇಳದ ಹಿನ್ನೆಲೆಯಲ್ಲಿ ಐಐಎಚ್‌ಆರ್‌ನ ನಾನಾ ವಿಭಾಗಗಳ ವಿಜ್ಞಾನಿಗಳು ಒಂದೆಡೆ ಸಮಾವೇಶಗೊಂಡು ದೇಶದ ನಾನಾ ಭಾಗಗಳಿಂದ ಬರುವ ರೈತರಿಗೆ ಹಾಗೂ ಸಂಶೋಧನಾರ್ಥಿಗಳಿಗೆ ತೋಟಗಾರಿಕೆ ಬೆಳೆಗಳ ಬಗ್ಗೆ ಮಾಹಿತಿ ನೀಡುತ್ತಿದ್ದರು. ಕೆಲವರು ಬಾಗಲಕೋಟೆ, ಬೀದರ್ ಮತ್ತಿತರ ಭಾಗಗಳಿಂದ ಕೊಳೆರೋಗ ಇತ್ಯಾದಿ ಸಮಸ್ಯೆಗಳ ಫೋಟೊದೊಂದಿಗೆ ಆಗಮಿಸಿ ಅದಕ್ಕೆ ಪರಿಹಾರ ಕೇಳುತ್ತಿದ್ದರು.

ಇನ್ನೂ ಕೆಲವರು ಗಿಡ, ಕೀಟ ಬಾಧೆ, ಇಳುವರಿ, ಯಾವ ಬೆಳೆಗೆ ಯಾವಾಗ ಯಾವ ಔಷಧಿ ಸಿಂಪಡಿಸಬೇಕು ಎಂಬುದೂ ಸೇರಿದಂತೆ ನಾನಾ ಪ್ರಶ್ನೆ, ಸಂದೇಹಗಳನ್ನು ಕೇಳಿ ಆಯಾ ವಿಭಾಗದ ವಿಜ್ಞಾನಿಗಳಿಂದ ಮಾಹಿತಿ ಪಡೆಯುತ್ತಿದ್ದರು. ಸಮಸ್ಯೆಗಳೊಂದಿಗೆ ಬಂದ ರೈತರಿಗೆ ಮಾಹಿತಿ ನೀಡುವಲ್ಲಿ ವಿಜ್ಞಾನಿಗಳ ತಂಡ ಕೂಡ ಉತ್ಸಾಹದಿಂದ ಕಾರ್ಯ ನಿರ್ವಹಿಸುತ್ತಿತ್ತು. ಎಲ್ಲಾ ವಿಜ್ಞಾನಿಗಳು ಒಂದೇ ಕಡೆ ಸಿಗುತ್ತಿದ್ದರಿಂದ ರೈತರಿಗೂ ಅನುಕೂಲವಾಗಿತ್ತು.

ಸಂಸ್ಥೆಯಲ್ಲಿ ನಡೆಸುತ್ತಿರುವ ತೋಟಗಾರಿಕಾ ತಂತ್ರಜ್ಞಾನದ



ಕಾರ್ಯಗಾರದಲ್ಲಿ 40ಕ್ಕೂ ಹೆಚ್ಚು ಉತ್ಸಾಹಿ ಯುವಕರು ಪಾಲ್ಗೊಂಡಿದ್ದರು. ಸಂಸ್ಥೆಯ ತಂತ್ರಜ್ಞಾನ ಅಳವಡಿಸಿಕೊಂಡು ಇತರ ರೈತರಿಗೆ ಮಾದರಿಯಾಗಿರುವ 8 ಮಂದಿ ಪ್ರಗತಿಪರರನ್ನು ಐಐಎಚ್‌ಆರ್‌ನ ನಿರ್ದೇಶಕ ಡಾ.ಎಸ್.ಕೆ. ಸಿಂಗ್ ಸನ್ಮಾನಿಸಿದರು. ಬೆಂಗಳೂರಿನ ಅಟಾರಿಯ ಪ್ರಧಾನ ವಿಜ್ಞಾನಿ ಡಾ. ಡಿವಿಎಸ್ ರೆಡ್ಡಿ ಪ್ರಧಾನ ವಿಜ್ಞಾನಿಗಳಾದ ಡಾ. ಸಿ.ಕೆ. ನಾರಾಯಣ, ಡಾ.ಸಿ.ಆಶ್ವತ್ಥ್, ಮೇಳದ ಕಾರ್ಯದರ್ಶಿ ಡಾ. ವೆಂಕಟ್ ಕುಮಾರ್ ಭಾಗವಹಿಸಿದ್ದರು.

ಬೀಜ ಖರೀದಿಗೆ ಜನವೋ ಜನ

ಐಐಎಚ್‌ಆರ್ ಅಭಿವೃದ್ಧಿಪಡಿಸಿರುವ ಹಣ್ಣು, ತರಕಾರಿ, ಹೂವು ಸುಧಾರಿತ ಬೆಳೆಗಳ ಬಿತ್ತನೆ ಬೀಜಗಳನ್ನು ಖರೀದಿಸುವಲ್ಲಿ ರೈತರಿಗಿಂತ ಹೆಚ್ಚಾಗಿ ನಗರದ ಜನರು ಮುಗಿ ಬಿದ್ದು ಖರೀದಿಸುತ್ತಿದ್ದರು. 30 ರೂ.ನಿಂದ ಆರಂಭವಾಗುತ್ತಿದ್ದ ಬಿತ್ತನೆ ಬೀಜದ ಪ್ಯಾಕ್‌ಗಳಲ್ಲಿ ವಿಶೇಷವಾಗಿ ಪಾಲಕ್ ಸೊಪ್ಪು, ಹೀರೆಕಾಯಿ ಮತ್ತಿತರ ಬೀಜಗಳನ್ನು ಖರೀದಿಸುತ್ತಿದ್ದರು. 1 ಗ್ರಾಂ ನಿಂದ 10 ಗ್ರಾಂವರೆಗೆ ಬಿತ್ತನೆ ಬೀಜಗಳು ಮಾರಾಟವಾಗುತ್ತಿದ್ದವು. ಜತೆಗೆ ಕಿಚನ್ ಗಾರ್ಡನ್ ಕಿಟ್‌ಗಳಿಗೂ ಹೆಚ್ಚು ಬೇಡಿಕೆಯಿತ್ತು. 25 ನಾನಾ ತರಕಾರಿಯ ಬೀಜಗಳು, 10 ಬಗೆಯ ಹೂವಿನ ಬೀಜಗಳು ಮಾರಾಟವಾಗುತ್ತಿದ್ದವು. ಇದರ ಕೌಂಟರ್ ಪ್ರತ್ಯೇಕವಾಗಿತ್ತು. ಜತೆಗೆ ನರ್ಸರಿಗಳಲ್ಲಿ ಸಸಿಗಳೂ ಹೆಚ್ಚು ಮಾರಾಟವಾಗುತ್ತಿವೆ.

ಸೌತೆಕಾಯಿ ವಿಶೇಷತೆ

- ಆರ್ಕಾ ವೀರ ಸೌತೆಕಾಯಿ ಕಹಿ ಇಲ್ಲ
- ಕ್ಯಾಲ್ಸಿಯಂ, ಮಾಗ್ನಿಷಿಯಂ ಮತ್ತಿತರ ಅಂಶಗಳು ಹೇರಳ
- ಹೆಕ್ಟೇರ್‌ಗೆ 25-30 ಟನ್ ಇಳುವರಿ
- ಕೇದಿಗೆ ಅಥವಾ ಬೂಜು ರೋಗ (ಡೌನಿ ಮಿಲ್ಡ್) ತಡೆಯುವ ಶಕ್ತಿ ಹೊಂದಿದೆ.
- ಬೀಜ ಬಿತ್ತಿದ 55 ದಿನಗಳಿಗೆ ಕಾಯಿ ಬಿಡುವುದು

ಗಮನ ಸೆಳೆದ ಸುಧಾರಿತ ಸೌತೆ

ಮೊದಲ ಬಾರಿಗೆ ಸುಧಾರಿತ ಸೌತೆಕಾಯಿ ತಳಿಯನ್ನು ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು ಅಭಿವೃದ್ಧಿಪಡಿಸಿದೆ.

'ಆರ್ಕಾ ವೀರ' ಎಂಬ ಹೆಸರಿನ ತಳಿ ಇದಾಗಿದೆ. ಭಾರತೀಯ ತೋಟಗಾರಿಕೆ ಸಂಸ್ಥೆ ಆರಂಭವಾಗಿ 53 ವರ್ಷಗಳಾಗಿವೆ. ಈವರೆಗೆ 126 ತರಕಾರಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ಪೈಕಿ 38 ಸಂಕರಣ ತಳಿಗಳನ್ನು ಅಭಿವೃದ್ಧಿಪಡಿಸಿದರೆ, ಉಳಿದವು ಸುಧಾರಿತ ತಳಿಗಳು. ಇದೀಗ ಈ ಸುಧಾರಿತ ತಳಿಗಳ ಜತೆಗೆ ಆರ್ಕಾ ವೀರ ಸೌತೆ ಕೂಡ ಸೇರಿದೆ. ಅಷ್ಟೇ ಅಲ್ಲ, ರೈತರೇ ಬೀಜೋತ್ಪಾದನೆ ಮಾಡಿಕೊಳ್ಳಬಹುದಾದ ಸುಧಾರಿತ ತಳಿ ಇದಾಗಿರುವುದು ಮತ್ತೊಂದು ವಿಶೇಷ.

''ವಿಜ್ಞಾನಿಗಳ ಕೊರತೆಯೂ ಇರುವುದರಿಂದ ಹೆಚ್ಚಿನ ತಳಿಗಳನ್ನು ಮಾಡುವುದು ಕಷ್ಟ. ಹೀಗಾಗಿ, ಐಆರ್‌ಸಿ ಅನುಮತಿ ಹಾಗೂ ಆದ್ಯತೆ ಮೇರೆಗೆ ಈಗ ಸೌತೆಕಾಯಿಯನ್ನು ಅಭಿವೃದ್ಧಿಪಡಿಸಲಾಗಿದೆ,'' ಎಂದು ಐಐಎಚ್‌ಆರ್‌ನ ತರಕಾರಿ ವಿಭಾಗದ ಪ್ರಧಾನ ವಿಜ್ಞಾನಿ ಡಾ. ಪಿಚ್ಚೈಮುತ್ತು ತಿಳಿಸುತ್ತಾರೆ.

25-02-2023
V-karnataka Pg 05

ಕೃಷಿ ಅನುದಾನ ಐದು ಪಟ್ಟು ಹೆಚ್ಚಳ: ಪ್ರಧಾನಿ

ಕೃಷಿ ಕ್ಷೇತ್ರಕ್ಕೆ ಭಾರೀ ಆದ್ಯತೆ



ಹೊಸದಿಲ್ಲಿ: 2014ರಿಂದೀಚೆಗೆ ಭಾರತದ ಕೃಷಿ ರಂಗಕ್ಕೆ ನೀಡಲಾಗುವ ಬಜೆಟ್ ಅನುದಾನದಲ್ಲಿ ಐದು ಪಟ್ಟು ಹೆಚ್ಚಳವಾಗಿದೆ, ಅಂದರೆ 1.25 ಲಕ್ಷ ಕೋಟಿಗಳಿಗೇರಿದೆ. ಪ್ರಸಕ್ತ ಬಜೆಟ್ ಮತ್ತು ಕಳೆದ ಏಳೆಂಟು ವರ್ಷಗಳ ಬಜೆಟ್‌ನಲ್ಲಿ ಕೃಷಿ ರಂಗಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. 2014ರಲ್ಲಿ ತಾನು ಅಧಿಕಾರ ಸೂತ್ರ ಹಿಡಿದಾಗ ಕೃಷಿ ರಂಗಕ್ಕೆ ಮೀಸಲಾಗಿದ್ದ ಬಜೆಟ್ ಮೊತ್ತ ಬರೀ 25 ಸಾವಿರ ಕೋಟಿ ರೂ.ಗಳು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.



ನನ್ನ ಸರ್ಕಾರ ಕೃಷಿರಂಗದ ಪ್ರಗತಿಗೆ ಆದ್ಯತೆ ನೀಡುತ್ತಿದೆ. ಖಾದ್ಯ ತೈಲದಂತಹ ಆಹಾರೋತ್ಪನ್ನಗಳ ಮೇಲಿನ ಆಮದು ಅವಲಂಬನೆಯನ್ನು ಕುಗ್ಗಿಸಲು ಗರಿಷ್ಠ ಶ್ರಮಿಸುತ್ತಿದೆ ಎಂದಿದ್ದಾರೆ. ➡2

ಜಾಗತಿಕ ಮಾರುಕಟ್ಟೆ ತೆರೆದಿದೆ

ಭಾರತೀಯ ಕೃಷಿಕರಿಗೆ ಜಾಗತಿಕ ಮಾರುಕಟ್ಟೆಯ ಬಾಗಿಲುಗಳು ತೆರೆದುಕೊಂಡಿವೆ. ಬಜೆಟ್‌ನಲ್ಲಿ ಸಿರಿಧಾನ್ಯಕ್ಕೆ ಶ್ರೀ ಅನ್ನವೆಂಬ ಮಾನ್ಯತೆ ನೀಡಲಾಗಿದೆ. ಸಣ್ಣ ಕೃಷಿಕರಿಗೆ ಪ್ರಯೋಜನವಾಗಲು ಮತ್ತು ಪ್ರಸ್ತುತ ರಂಗದಲ್ಲಿ ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ಉತ್ತೇಜನ ನೀಡಲು ಶ್ರೀ ಅನ್ನವನ್ನು ಪ್ರೋತ್ಸಾಹಿಸಲಾಗುತ್ತಿದೆ.

ಸ್ವಾವಲಂಬನೆ ಗುರಿ ಅಕ್ಕಿ, ಗೋಧಿಗೆ ಸೀಮಿತವಲ್ಲ

ಭಾರತ ಇಂದು ನಾನಾ ಬಗೆಯ ಕೃಷ್ಯುತ್ಪನ್ನಗಳನ್ನು ರಫ್ತು ಮಾಡುತ್ತಿದೆ. ದೇಶೀ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳು ರೈತರಿಗೆ ಎಟಕುವಂತಾಗಲು ಸರಕಾರ ಪ್ರಯತ್ನಗಳನ್ನು ಮಾಡುತ್ತಿದೆ. ಸ್ವಾವಲಂಬನೆ ಅಥವಾ ರಫ್ತಿನ ವಿಚಾರದಲ್ಲಿ ಭಾರತದ ಗುರಿ ಕೇವಲ ಅಕ್ಕಿ ಅಥವಾ ಗೋಧಿಗೆ ಸೀಮಿತವಾಗಕೂಡದು. ➡2

ತೋಟಗಾರಿಕೆ ಮೇಳ: ಭರಪೂರ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ಆವರಣದಲ್ಲಿ ನಡೆಯುತ್ತಿರುವ 'ರಾಷ್ಟ್ರೀಯ ತೋಟಗಾರಿಕಾ ಮೇಳ-2023'ಕ್ಕೆ ಶುಕ್ರವಾರ 12 ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡಿದರು.

ವಿವಿಧ ಜಾತಿಗಳ ಹೂವು, ಹಣ್ಣು, ತರಕಾರಿಗಳ ಪ್ರದರ್ಶನವಿದೆ. ಬಿತ್ತನೆ ಬೀಜ, ರಸಗೊಬ್ಬರ, ಯಂತ್ರೋಪಕರಣ, ಹೂವಿನ ಗಿಡ, ಆಲಂಕಾರಿಕ ಪುಷ್ಪಗಳು, ಔಷಧೀಯ ಗಿಡಗಳು, ಸೌಗಂಧಿಕ ಬೆಳೆಗಳು, ಅಣಬೆ ಬೆಳೆಗಳ ಉತ್ಪಾದನೆ ಮತ್ತು ಮೌಲ್ಯವರ್ಧಿತ ತಂತ್ರಜ್ಞಾನಗಳ ನೋಟ ಮೇಳಕ್ಕೆ ಮೆರುಗು ನೀಡುತ್ತಿವೆ. ಈ ಕುರಿತು ಆಸಕ್ತ ರೈತರು ಮತ್ತು ಯುವಕರು ಐಐಎಚ್‌ಆರ್‌ನ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು.

ಶುಕ್ರವಾರ ನಡೆದ ತೋಟಗಾರಿಕಾ ತಂತ್ರಜ್ಞಾನದ ಕಾರ್ಯಾಗಾರದಲ್ಲಿ 40ಕ್ಕೂ ಹೆಚ್ಚು ಉತ್ಸಾಹಿ ಯುವಕರು ಪಾಲ್ಗೊಂಡಿದ್ದರು. ನೆರೆಯ ರಾಜ್ಯಗಳಾದ ಕೇರಳ, ತೆಲಂಗಾಣ, ಆಂಧ್ರ, ತಮಿಳುನಾಡು, ಪುದುಚೇರಿಯಿಂದ ಕೃಷಿಕರು, ತೋಟಗಾರಿಕಾ ಉತ್ಪನ್ನಗಳ ಉದ್ದಿಮೆದಾರರು ಮೇಳಕ್ಕೆ ಭೇಟಿ ನೀಡಿದ್ದಾರೆ. ಕೇರಳದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಆಸಕ್ತರು ಬಂದಿದ್ದಾರೆ' ಎಂದು ಆಯೋಜಕರು ತಿಳಿಸಿದರು.

'ಐಐಎಚ್‌ಆರ್‌ನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಚಿತ್ರದುರ್ಗದ ಯುವ ರೈತ ಮನೋಜ್ ಬಿ., ಒಡಿಶಾದ ಸುರೇಶ್ ಚಂದ್ರ ಓಟ, ಚಿಕ್ಕಬಳ್ಳಾಪುರದ ಅಶ್ವತಪ್ಪ, ಚಾಮರಾಜನಗರದ ಮಹೇಶ್ ನಾಯಕ್, ಬೆಂಗಳೂರಿನ ಯುವ ಉದ್ಯಮಿ ಸತೀಶ, ಬಿಜಾಪುರದ ಆರ್.ಎಸ್. ಪಾಟೀಲ್, ತುಮಕೂರಿನ ವೆಂಕಟರಾಯಪ್ಪ ಅವರನ್ನು ಸನ್ಮಾನಿಸಲಾಯಿತು' ಎಂದು ಐಐಎಚ್‌ಆರ್‌ನ ನಿರ್ದೇಶಕ ಎಸ್. ಕೆ. ಸಿಂಗ್ ಮಾಹಿತಿ ನೀಡಿದರು.

ಬೆಂಗಳೂರಿನ ಅಟಾರಿಯ ಪ್ರಧಾನ ವಿಜ್ಞಾನಿಗಳಾದ ಡಾ. ಡಿ.ವಿ.ಎಸ್ ರೆಡ್ಡಿ, ಡಾ. ಸಿ. ಕೆ. ನಾರಾಯಣ ಡಾ. ಪ್ರಕಾಶ್ ಪಾಟೀಲ್, ಡಾ. ಸಿ ಅಶ್ವತ್ಥ್, ವೆಂಕಟ್ ಕುಮಾರ್ ಇದ್ದರು.

25-02-2023
Prajavani Pg 5B

ಕೃಷಿ ಕ್ಷೇತ್ರಕ್ಕೆ ಭಾರೀ ಆದ್ಯತೆ

➡ 2023ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಗಿರುವ ಉಪಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಬಲ್ಲ ಸಲಹೆ ಸೂಚನೆಗಳ ಕ್ರೋಡೀಕರಣಕ್ಕಾಗಿ, ಸರ್ಕಾರ ಸರಣಿಯೋಪಾದಿ ಯಲ್ಲಿ 12 ವಿಚಾರ ಸಂಕಿರಣ ಆಯೋಜಿಸಲಿದೆ. ಈ ಪೈಕಿ ದ್ವಿತೀಯ ವಿಚಾರ ಸಂಕಿರಣದಲ್ಲಿ ಪ್ರಧಾನಿ ಮಾತನಾಡಿದರು.

ಕೃಷಿ ಮತ್ತು ಸಹಕಾರಿಗಳು ಬಜೆಟ್ ನಂತರದ ಈ ವಿಚಾರ ಸಂಕಿರಣದ ಮೂಲ ವಿಷಯ. ದೇಶಾದ್ಯಂತ ಸಹಕಾರಿ ರಂಗದ ವಿಸ್ತರಣೆಯ ಜತೆ ಅತ್ಯಧಿಕ ಯುವಶಕ್ತಿಯನ್ನು ಕೃಷಿರಂಗಕ್ಕೆ ಆಕರ್ಷಿಸಲು ಬಜೆಟ್‌ನಲ್ಲಿ ಹಲವು ಕ್ರಮಗಳನ್ನು ಪ್ರಕಟಿಸಲಾಗಿದೆ. ಕೃಷಿರಂಗ ಅಭಿವೃದ್ಧಿಗೊಂಡಲ್ಲಿ ರಾಷ್ಟ್ರವು ಆತ್ಮನಿರ್ಭರವಾಗುತ್ತದೆ ಮತ್ತು ಆಮದಿಗಾಗಿ ವ್ಯಯಿಸುವ ಮೊತ್ತ ರೈತರನ್ನು ತಲುಪಲು ಸಾಧ್ಯ. ಹಾಗಾಗಿ ಕೃಷಿ ರಂಗದ ಅಭಿವೃದ್ಧಿಗಾಗಿ ಹಲವು ನಿರ್ಧಾರಗಳನ್ನು ನಿರಂತರ ನೆಲೆಯಲ್ಲಿ ಕೈಗೊಳ್ಳಲಾಗಿದೆ ಎಂದರು.

ಗ್ರಾಮಾಭ್ಯುದಯಕ್ಕಾಗಿ ಬಜೆಟ್: ಈಚಿನ ವರ್ಷಗಳ ಪ್ರತಿ ಬಜೆಟ್ ಕೂಡ ಬಜೆಟ್ ಫಾರ್ ಗಾಂವ್, ಗರೀಬ್ ಮತ್ತು ಕಿಸಾನ್‌ಗಳಿಗಾಗಿ ಎಂದು ಹೆಸರುವಾಸಿಯಾಗಿದೆ. ಸ್ವಾತಂತ್ರ್ಯಾನಂತರ ಸುದೀರ್ಘ ವರ್ಷಗಳ ಕಾಲ ಭಾರತದ ಕೃಷಿರಂಗದ ಸ್ಥಿತಿ ಶೋಚನೀಯವಾಗಿತ್ತು ಮತ್ತು ಆಹಾರ ಭದ್ರತೆಗಾಗಿ ಭಾರತವು ಬಾಹ್ಯ ಜಗತ್ತನ್ನು ಅವಲಂಬಿಸಿತ್ತು ಎಂದು ವಿಷಾದಿಸಿದರು.

ರೈತರ ಶ್ರಮ ಅಭಿನಂದನಾರ್ಹ: ಕೃಷಿ ರಂಗದ ಬೆಳವಣಿಗೆಗಾಗಿ ಸರಕಾರ ಬಜೆಟ್‌ನಲ್ಲಿ ನಿರಂತರ ನೆಲೆಯಲ್ಲಿ ಹಲವು ಕ್ರಮಗಳನ್ನು ಕೈಗೊಂಡಿದೆ. ಎಂಎಸ್‌ಪಿಯಲ್ಲಿ ಹೆಚ್ಚಳ, ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಳ, ಆಹಾರ ಸಂಸ್ಕರಣಾ ಕೇಂದ್ರಗಳ ಸಂಖ್ಯೆ ಹೆಚ್ಚಳ, ಖಾದ್ಯ ತೈಲರಂಗದಲ್ಲಿ ಸಂಪೂರ್ಣ ಸ್ವಾವಲಂಬಿಯಾಗಲು ಗರಿಷ್ಠ ಶ್ರಮ ವಹಿಸಿದೆ. ರಾಷ್ಟ್ರವನ್ನು ಆತ್ಮನಿರ್ಭರಗೊಳಿಸಿದ್ದು ಮಾತ್ರವಲ್ಲ, ಆಹಾರ ಧಾನ್ಯಗಳ ರಫ್ತಿಗೆ ಭಾರತ ಶಕ್ತವಾಗುವಂತೆ ಮಾಡುವ ಮೂಲಕ ಭಾರತದ ಕೃಷಿರಂಗದ ಚಿತ್ರಣವನ್ನೇ ಬದಲಿಸಿದ ರೈತರ ಶ್ರಮ ಅಭಿನಂದನಾರ್ಹ ಎಂದು ಪ್ರಶಂಸಿಸಿದರು.

ಸ್ವಾವಲಂಬನೆ ಗುರಿ ಅಕ್ಕಿ, ಗೋಧಿಗೆ ಸೀಮಿತವಲ್ಲ

➡ ಕೃಷಿ ರಂಗದ ಸವಾಲುಗಳೆಲ್ಲವೂ ಭಗೆಹರಿಯುವವರೆಗೆ ಸಂಪೂರ್ಣ ಅಭಿವೃದ್ಧಿಯ ಗುರಿ ಸಾಧನೆಯಾಗದು ಎಂದರು.

ಖಾಸಗಿ ಆವಿಷ್ಕಾರ, ಹೂಡಿಕೆಗಳು ಕೃಷಿ ರಂಗದಲ್ಲಿ ಕಡಿಮೆ. ಹಾಗಾಗಿ ಭಾರತದ ಯುವಶಕ್ತಿ ಕೂಡ ಇತರ ರಂಗಗಳಲ್ಲಿ ತೊಡಗುವಲ್ಲಿ ಮತ್ತು ಅವುಗಳ ಬೆಳವಣಿಗೆ ವಿಚಾರದಲ್ಲಿ ವಹಿಸುವ ಆಸಕ್ತಿಯನ್ನು ಕೃಷಿರಂಗದತ್ತ ತೋರುವುದಿಲ್ಲ. ಈ ಕೊರತೆ ನೀಗಲು ಬಜೆಟ್‌ನಲ್ಲಿ ವಿವಿಧ ಘೋಷಣೆಗಳನ್ನು ಸರಕಾರ ಮಾಡಿದೆ ಎಂದರು.

ಟಿಡಿಎಸ್ ವಿಧಿಸಲ್ಲ

ಸಹಕಾರಿ ಸೊಸೈಟಿಗಳ ಬರೋಬ್ಬರಿ 3 ಕೋಟಿ ರೂ. ವಿಥ್‌ಡ್ರಾವಲ್‌ಗಳ ಮೇಲೆ ಟಿಡಿಎಸ್ ವಿಧಿಸಲಾಗುವುದಿಲ್ಲ. 2016-17ರ ಮುನ್ನ ತೆರಿಗೆ ಪಾವತಿಸಿದಂತಹ ಸಕ್ಕರೆ ಸಹಕಾರ ಸಂಘಗಳಿಗೆ ತೆರಿಗೆ ವಿನಾಯಿತಿ ಕಲ್ಪಿಸುವ ಮಹತ್ತ್ವದ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ. ಇದರಿಂದ ಸಕ್ಕರೆ ಸಹಕಾರಿ ಸಂಘಗಳಿಗೆ 10 ಸಾವಿರ ಕೋಟಿ ರೂ.ಗಳಷ್ಟು ಪ್ರಯೋಜನವಾಗಲಿದೆ ಎಂದರು. ರಾಸಾಯನಿಕ ಆಧಾರಿತ ಕೃಷಿಯನ್ನು ಆದಷ್ಟು ಕಡಿಮೆ ಮಾಡಿ, ನೈಸರ್ಗಿಕ ಕೃಷಿಗೆ ಉತ್ತೇಜನವೀಯುವುದು ಸರಕಾರದ ಪಿಎಂ ಪ್ರಾಣಂ ಯೋಜನೆ ಮತ್ತು ಗೋವರ್ಧನ್ ಯೋಜನೆಯ ಮೂಲಾಶಯವೆಂದು ಮೋದಿ ಹೇಳಿದರು.

25-02-2023
Hosadiganta Pg 01

25-02-2023
V-karnataka Pg 10

ಕೃಷಿ ಮೇಳ ಮಾ.16ಕ್ಕೆ

ಬೆಂಗಳೂರು: ಅಲ್ಲಾಳಸಂದ್ರದಲ್ಲಿರುವ ಸಿಎಸ್‌ಐಆರ್ ಕೇಂದ್ರೀಯ ಔಷಧೀಯ ಮತ್ತು ಸುಗಂಧ ಸಸ್ಯಗಳ ಸಂಸ್ಥೆಯು ರೈತರು, ಉದ್ಯಮಿಗಳು ಮತ್ತು ಸಾರ್ವಜನಿಕರಿಗಾಗಿ ಮಾರ್ಚ್ 16ರಂದು ಔಷಧೀಯ, ಸುಗಂಧ ಸಸ್ಯಗಳು ಮತ್ತು ಸಾರಭೂತ ತೈಲ ಕುರಿತು ಒಂದು ದಿನದ ಕೃಷಿ ಮೇಳವನ್ನು ಆಯೋಜಿಸಿದೆ. ಅಂದು ಬೆ.10ರಿಂದ ಸಂಜೆ 5ರವರೆಗೆ ಮೇಳ ನಡೆಯಲಿದೆ. ಆಸಕ್ತರು ಹೆಚ್ಚಿನ ವಿವರಗಳಿಗಾಗಿ www.cimap.res.in ಗೆಭೇಟಿ ನೀಡಬಹುದು.

ವಿದ್ಯಾರ್ಥಿಗಳು, ಯುವಜನರ ಕೃಷಿ ಒಲವು

ತೋಟಗಾರಿಕೆ ಮೇಳಕ್ಕೆ 3ನೇ ದಿನ 12 ಸಾವಿರ ಮಂದಿ ಭೇಟಿ । ಹೊಸ ತಳಿ, ತರಕಾರಿ, ಹೂಹಣ್ಣುಗಳ ಬೀಜ ಖರೀದಿ

ಬೆಂಗಳೂರು: ನಗರದ ಹೆಸರಘಟ್ಟದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ತೋಟಗಾರಿಕೆ ಮೇಳದ 3ನೇ ದಿನವೂ 12 ಸಾವಿರಕ್ಕೂ ಹೆಚ್ಚು ಜನರು ಆಗಮಿಸಿ, ವಿವಿಧ ತಳಿಯ ಬೆಳೆಗಳನ್ನು ತರಕಾರಿ ಬೀಜ ಹಾಗೂ ಗೊಬ್ಬರಗಳ ಬಗ್ಗೆ ತಿಳಿದುಕೊಳ್ಳಲು ರೈತರು ಮುಂದಾಗಿದ್ದರು.

ಮೇಳಕ್ಕೆ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಯುವಕರು ಆಗಮಿಸಿದ್ದು ಕೃಷಿಯ ಕಡೆ ಹೆಚ್ಚು ಒಲವು ತೋರಿಸುತ್ತಿದ್ದರು. ಮೆಕ್ಕೆಜೋಳ, ಬದನೆ, ಮೆಣಸಿನಕಾಯಿ, ಈರುಳ್ಳಿ ಬೆಂಡೆ, ಗುಲಾಬಿ ಬೆಳೆ, 108 ವಿಧದ ವೀಳ್ಯದೆಲೆ, ಚೆಂಡು ಹೂ ಸೇರಿದಂತೆ ಆರ್ಯುವೇದ ಗಿಡಗಳ ಬಗ್ಗೆ ಸಂಬಂಧಿಸಿದ ವಿಜ್ಞಾನಿಗಳ ಬಳಿ ಮಾಹಿತಿ ಪಡೆದರು.

ಟ್ರ್ಯಾಕ್ಟರ್, ಆಳತೆಗೆ ತಕ್ಕಂತೆ ಈರುಳ್ಳಿ ಬೇರ್ಪಡಿಸುವ ಯಂತ್ರ, ಬೇಸಿಗೆಯಲ್ಲಿ ತರಕಾರಿ ಮಾರುವ ತ್ರಿಚಕ್ರ ವಾಹನ, ನೀರನ್ನು ಉಳಿತಾಯ ಮಾಡುವ ಹೈಡ್ರೊ ಆಗ್ರಿ ಮಿತ್ರ, ಫಾರ್ಮ್ ರೋವರ್, ಫೈಬರ್ ದೋಟಿ ಎಂಬ ಯಂತ್ರಗಳ ಪ್ರದರ್ಶನ ಒಂದೆಡೆಯಾದರೆ, ಮತ್ತೊಂದೆಡೆ ವಿವಿಧ ತಳಿಯ ಹಣ್ಣು-ತರಕಾರಿ ಬೀಜಗಳು, ನರ್ಸರಿ, ತಿಂಡಿ-ತಿನಿಸುಗಳು, ಹೂವಿನ ದಳದಿಂದ ತಯಾರಿಸಿದ ಧೂಪ, ಅಗರಬತ್ತಿಗಳ ಪರಿಮಳ ಮತ್ತೊಂದೆಡೆ ಆಕರ್ಷಕವಾಗಿದ್ದವು.

ಡ್ರ್ಯಾಗನ್ ಫ್ರೂಟ್ ಐಸ್‌ಕ್ರೀಂಗೆ ಮುಗಿಬಿದ್ದ ಜನ: ತೋಟಗಾರಿಕೆ ಮೇಳಕ್ಕೆ ಆಗಮಿಸಿದ್ದ ಬಹುತೇಕ ಜನರ ಕೈಯಲ್ಲಿ ಡ್ರ್ಯಾಗನ್ ಫ್ರೂಟ್‌ನಿಂದ ತಯಾರಿಸಿದ ಐಸ್‌ಕ್ರೀಂ ಇತ್ತು. ಡ್ರ್ಯಾಗನ್ ಫ್ರೂಟ್‌ನ ಬಿಳಿ ಮತ್ತು ಕೆಂಪು ತಳಿಯ ಹಣ್ಣಿನಿಂದ ಕ್ಯಾಂಡಿ ಮತ್ತು ಕಪ್ ನೈಸರ್ಗಿಕ ಐಸ್‌ಕ್ರೀಂ ತಿನ್ನಲು ಯುವಕರು ಮುಗಿಬಿದ್ದಿದ್ದರು. ಯಾವುದೇ ರಾಸಾಯನಿಕಗಳನ್ನು ಬಳಸದೇ, ಕಡಿಮೆ ಪ್ರಮಾಣದ ಶುಗರ್ ಬಳಸಿ ತಯಾರಿಸಿದ ಈ ಐಸ್‌ಕ್ರೀಂ ತಿಂದರೆ, ತಾಜಾ ಹಣ್ಣು ತಿಂದ ಅನುಭವವಾಗುತ್ತದೆ ಎಂದು ಗ್ರಾಹಕ ರೊಬ್ಬರು ತಿಳಿಸುತ್ತಾರೆ.

ಫ್ಯಾಮ್ಕೊದಿಂದ ಮೂಳೆಗೊಬ್ಬರ: ಆಡಕೆ, ತೆಂಗು, ರಬ್ಬರ್, ಶುಂಠಿ ಬೆಳೆಗಳನ್ನು ವೃದ್ಧಿಗೊಳಿಸಲು ಬೋನ್ ಮೀಲ್ (ಮೂಳೆಗೊಬ್ಬರ) ಹೆಚ್ಚಿನ ರಂಜಕ ಅಂಶವನ್ನು ಒಳಗೊಂಡ ಸಾವಯವ ಗೊಬ್ಬರ ಮಾರಾಟಕ್ಕಿಡಲಾಗಿತ್ತು. ಇದನ್ನು ಖರೀದಿಸಲು ಮೈಸೂರಿನ ಫಾಮ್ಕೊ ಸಂಸ್ಥೆಯ ಮಳಿಗೆಯಲ್ಲಿ ರೈತರು ವಿಶೇಷ ಆಸಕ್ತಿ ತೋರುತ್ತಿದ್ದರು. ಸಸ್ಯಗಳ ನಿರಂತರ ಬೆಳವಣಿಗೆಗೆ ಇದು ಹೆಚ್ಚು ಸಹಕಾರಿಯಾದ ಗೊಬ್ಬರ ಎಂದು ಮಾರಾಟಗಾರರಾದ ಅಲೀಮ್ ಮಾಹಿತಿ ನೀಡಿದರು. ಜತೆಗೆ ಬೇವಿನ ಕೇಕ್ ಮತ್ತಿತರ ಗೊಬ್ಬರಗಳ ಬಗೆಗೂ ರೈತರಿಗೆ ಮಾಹಿತಿ ಹಂಚುತ್ತಿದ್ದರು.

ಪ್ರಗತಿಪರ ರೈತರಿಗೆ ಸನ್ಮಾನ: ಸಂಸ್ಥೆಯ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಇತರೆ ರೈತರಿಗೆ ಮಾದರಿಯಾಗಿರುವ 8 ಪ್ರಗತಿಪರ ರೈತರನ್ನು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕರಾದ ಡಾ. ಎಸ್.ಕೆ. ಸಿಂಗ್ ಸನ್ಮಾನಿಸಿ, ನಿಮ್ಮಂತಹ ರೈತರಿಂದ ಸಂಸ್ಥೆಯ ತಂತ್ರಜ್ಞಾನ ದೇಶದುದ್ದಕ್ಕೂ ಪ್ರಸರಿಸಲು ಸಾಧ್ಯವೆಂದು ರೈತರ ಶ್ರಮವನ್ನು ಪ್ರಶಂಸಿಸಿದರು.

ಚಿತ್ರದುರ್ಗದ ಯುವ ರೈತ ಮನೋಜ್ ಬಿ, ಒಡಿಶಾದ ಸುರೇಶ್ ಚಂದ್ರ ಓಟ, ಆಂಧ್ರಪ್ರದೇಶದ ರಾಗಿ ಪತಿ ದಾವೆಡು, ಚಿಕ್ಕಬಳ್ಳಾಪುರದ ಅಶ್ವತ್ಥಪ್ಪ ಮತ್ತು ಸುಧಾಕರ್, ಚಾಮರಾಜನಗರದ ಮಹೇಶ್ ನಾಯಕ್, ಬೆಂಗಳೂರಿನ ಯುವ ಉದ್ಯಮಿ ಸತೀಶ, ಜಿಷಾಪುರದ ಹಿರಿಯ ರೈತ ಆರ್.ಎಸ್. ಪಾಟೀಲ್ ಹಾಗೂ ತುಮಕೂರಿನ ವಿರಾಕ್ತತಾರಾಯಪ್ಪ ಇವರು ಪ್ರಶಸ್ತಿ ಪುರಸ್ಕೃತರು.

ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಬೆಂಗಳೂರಿನ ಆಟಾರಿಯ ಪ್ರಧಾನ ವಿಜ್ಞಾನಿ ಡಾ.ವಿ.ಎಸ್ ರೆಡ್ಡಿ ಪ್ರಧಾನ ವಿಜ್ಞಾನಿ ಡಾ.ಸಿ.ಕೆ. ನಾರಾಯಣ, ಡಾ.ಪ್ರಕಾಶ್ ಪಾಟೀಲ್, ಎಸ್‌ಪಿಎಚ್‌ನ ಉಪಾಧ್ಯಕ್ಷ ಡಾ. ಸಿ. ಆಶ್ವತ್, ರಾಷ್ಟ್ರೀಯ ತೋಟಗಾರಿಕೆ ಮೇಳದ ಆಯೋಜನ ಕಾರ್ಯದರ್ಶಿ ಡಾ.ವೆಂಕಟ್ ಕುಮಾರ್ ಸೇರಿದಂತೆ ರೈತರು, ಮಹಿಳೆಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆಕರ್ಷಕ ಸೆಲ್ಫಿ ಸ್ಪಾಟ್

ಸಿರಿಧಾನ್ಯ, ಹೂವಿನ ಗಿಡ, ಕುಂಡದ ಗಿಡ, ಹುಲ್ಲು ಮುಂತಾದವುಗಳನ್ನು ಉಪಯೋಗಿಸಿ ನಿರ್ಮಿಸಿದ ಆಕರ್ಷಕ ಸೆಲ್ಫೀ ಸ್ಪಾಟ್ ಮೇಳದ ಕೇಂದ್ರಬಿಂದುವಾಗಿದ್ದು, ಮಹಿಳೆಯರು, ಹುಡುಗಿಯರು ಸೇರಿದಂತೆ ಎಲ್ಲರೂ ಇಲ್ಲಿ ಬಂದು ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಮುಂದಾಗಿದ್ದರು.



ಇಂದು ಕೊನೆದಿನ

ತೋಟಗಾರಿಕೆ ಮೇಳವು ಕಳೆದ 3 ದಿನಗಳಿಂದ ನಡೆಯುತ್ತಿದ್ದು, ಶನಿವಾರ ಕೊನೆ ದಿನವಾಗಿದೆ. ಕರ್ನಾಟಕ ಮತ್ತು ಇತರೆ ರಾಜ್ಯಗಳಿಂದ ರೈತರು, ಮಹಿಳೆಯರು, ವಿದ್ಯಾರ್ಥಿಗಳು, ಸ್ಥಳೀಯರು ಸೇರಿದಂತೆ ಸಾವಿರಾರು ಜನ ಆಗಮಿಸಿ ತೋಟಗಾರಿಕೆ ಬೆಳೆ, ಯಂತ್ರೋಪಕರಣ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ. ಇಂದು ಕೊನೆಯ ದಿನ ಹಾಗೂ ವೀಕೆಂಡ್ ಆದ ಕಾರಣ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಬಹುದು ಎಂಬ ನಿರೀಕ್ಷೆಯಿದೆ ಎಂದು ಆಯೋಜಕರು ಮಾಹಿತಿ ನೀಡಿದರು.

ವಿಜ್ಞಾನಿಗಳ ತಂಡದಿಂದ ರೈತರಿಗೆ ಮಾಹಿತಿ

ಮೇಳದ ಹಿನ್ನೆಲೆಯಲ್ಲಿ ಐಐಎಚ್ ಆರ್‌ನ ವಿವಿಧ ವಿಭಾಗಗಳ ವಿಜ್ಞಾನಿಗಳು ಒಂದೆಡೆ ಸಮಾವೇಶಗೊಂಡು ದೇಶದ ಹಲವು ಭಾಗಗಳಿಂದ ಬರುವ ರೈತರಿಗೆ ಹಾಗೂ ಸಂಶೋಧನಾರ್ಥಿಗಳು ಕೇಳುವ ಮಾಹಿತಿ, ಸಂದೇಹಗಳಿಗೆ ಸೂಕ್ತ ಪರಿಹಾರ ನೀಡುವಲ್ಲಿ ವಿಜ್ಞಾನಿಗಳ ತಂಡ ಭರದಿಂದ ಕಾರ್ಯ ನಿರ್ವಹಿಸುತ್ತಿತ್ತು. ಸಂಸ್ಥೆಯಲ್ಲಿ ನಡೆಸುತ್ತಿರುವ ತೋಟಗಾರಿಕಾ ತಂತ್ರಜ್ಞಾನದ ಕಾರ್ಯಾಗಾರದಲ್ಲಿ 40ಕ್ಕೂ ಹೆಚ್ಚು ಉತ್ಸಾಹಿ ಯುವಕರು ಪಾಲ್ಗೊಂಡಿದ್ದರು.



25-02-2023
Udayavani Pg 03

ಮಣ್ಣು ರಹಿತ ಕೃಷಿ ತಂತ್ರಜ್ಞಾನ ಆವಿಷ್ಕಾರ

ಸಂ.ಕ.ಸಮಾಚಾರ, ಬೆಂಗಳೂರು

ಹೆಸರಘಟ್ಟ ಗ್ರಾಮದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನೆ ಸಂಸ್ಥೆಯು ಮಣ್ಣು ರಹಿತ ಕೃಷಿ ತಂತ್ರಜ್ಞಾನವನ್ನು ಆವಿಷ್ಕಾರ ಮಾಡಿದೆ.

ಸಂಸ್ಥೆಯ ವಿಜ್ಞಾನಿ ಡಾ. ಕಲೈವನ್ನನ್ ಈ ತಂತ್ರಜ್ಞಾನವನ್ನು ಆವಿಷ್ಕಾರ ಮಾಡಿದ್ದು ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಈ ತಂತ್ರಜ್ಞಾನವು ರೈತರು ಮತ್ತು ನಗರ ವಾಸಿಗಳನ್ನು ಸೂಜಿಗಲ್ಲಿನಂತೆ ಸೆಳೆದಿದೆ. ಸಾಮಾನ್ಯವಾಗಿ ಕೃಷಿ ಎಂದ ಕೂಡಲೇ ಮಣ್ಣಿನಲ್ಲಿಯೇ ಮಾಡಬೇಕು ಎನ್ನುವ ಮನೋಭಾವನೆ ಎಲ್ಲರಲ್ಲಿಯೂ ಇದೆ. ಆದರೆ, ಮಣ್ಣು ರಹಿತವಾಗಿಯೂ ಅನೇಕ ಬೆಳೆಗಳನ್ನು ಬೆಳೆಯಬಹುದು.

ಮಣ್ಣು ರಹಿತ ತಂತ್ರಜ್ಞಾನವನ್ನು 2015ರಿಂದ ಪ್ರಯೋಗವನ್ನು ಮಾಡಲು ಶುರು ಮಾಡಿದವು. ತೆಂಗಿನ ನಾರನ್ನು ಬಳಸಿ ಬೆಳೆಗಳನ್ನು ಬೆಳೆಯುವ ವಿಧಾನ ಇದಾಗಿದೆ. ಈ ತಂತ್ರಜ್ಞಾನವನ್ನು ಮೊದಲು ತರಕಾರಿ ಬೆಳೆಗಳ ಮೇಲೆ ಮಾಡಲಾಯಿತು. ಈ ವಿಧಾನದಲ್ಲಿ ಅನೇಕ ತರಕಾರಿ ತಳಿಗಳನ್ನು ಬೆಳೆಯಲಾಗಿದೆ. ತೆಂಗಿನ ನಾರು (ಕೋ ಕೋ ಪಿಟ್) ಬಳಸಿ ತರಕಾರಿ ಬೆಳೆಯುವ ವಿಧಾನವು ಅತ್ಯಂತ ಸುಲಭದಾಯಕವಾಗಿದೆ. ಅಲ್ಲದೇ ಹೆಚ್ಚಿನ

ಹೆಚ್ಚಿನ ನೀರಿನ ಅವಶ್ಯಕತೆ ಇಲ್ಲ
ಕೀಟಬಾಧೆಯೂ ಇರುವುದಿಲ್ಲ

ಕೀಟ ಬಾಧೆಯು ಇದಕ್ಕೆ ಇರುವುದಿಲ್ಲ ಎನ್ನುತ್ತಾರೆ ವಿಜ್ಞಾನಿ ಡಾ.ಡಿ.ಕಲೈವನ್ನನ್. ಸಸ್ಯಗಳಿಗೆ ರೋಗವನ್ನು ತರುವ ಅನೇಕ ಬ್ಯಾಕ್ಟರಿಯಗಳು ಮಣ್ಣಿನಲ್ಲಿ ಇರುತ್ತದೆ. ಅಲ್ಲದೇ ಕೀಟಬಾಧೆಗಳು ಮಣ್ಣಿನಲ್ಲಿರುತ್ತದೆ. ತೆಂಗಿನ ನಾರನ್ನು ಉಪಯೋಗಿಸುವುದರಿಂದ ಸಸ್ಯಗಳಿಗೆ ರೋಗ ನಿರೋಧಕ ಶಕ್ತಿಯು ಇಮ್ಮಡಿಯಾಗುತ್ತದೆ ಮಾತ್ರವಲ್ಲ ಹೆಚ್ಚಿನ ಕೀಟಬಾಧೆ ಇರುವುದಿಲ್ಲ. ಮನೆಯ ಮೇಲೆ ತಾರಸಿ ತೋಟ ಮಾಡಲು ಇದು ತುಂಬಾ ಉಪಯುಕ್ತವಾಗಿದೆ.

ಟೊಮೇಟೊ, ಎಲೆ ಕೋಸು, ಮೆಣಸಿನಕಾಯಿ, ತೊಂಡೆ ಹಣ್ಣು, ಕರಿಬೇವಿನ ಸೊಪ್ಪು ಹೀಗೆ ಕುಟುಂಬಕ್ಕೆ ಬೇಕಾದ ಎಲ್ಲ ತರಕಾರಿಗಳನ್ನು ಬೆಳೆಯಬಹುದಾಗಿದೆ ಎಂದು ತಿಳಿಸಿದರು.

ಹಿರೇಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ವಿಷಯ ತಂತ್ರಜ್ಞಾನ ಕೆ.ಎನ್.ಜಗದೀಶ್ ಮಾತನಾಡಿ, ಸಸ್ಯ ಬೆಳವಣಿಗೆ 17 ಪೌಷ್ಟಿಕಾಂಶಗಳು ಬೇಕಾಗುತ್ತದೆ. ತಂಗಿನ ನಾರು ಉಪಯೋಗಿಸಿ ತರಕಾರಿಗಳನ್ನು ಬೆಳೆಯುವಾಗ ಪೌಷ್ಟಿಕಾಂಶಗಳಾಗಿ ಒಂದು ದ್ರವಣವನ್ನು ಕಂಡು ಹಿಡಿದಿದ್ದು ಅದನ್ನು ವಾರಕ್ಕೊಮ್ಮೆ ಅಥವಾ ಹದಿನೈದು ದಿನಕ್ಕೆ ಒಮ್ಮೆ ಹಾಕಬೇಕಾಗುತ್ತದೆ. ಭಾರತೀಯ ತೋಟಗಾರಿಕೆ ಸಂಶೋಧನೆ ಸಂಸ್ಥೆಯ ಬೀಜ ಮಾರಾಟ ವಿಭಾಗದಲ್ಲಿ ಇದು ಲಭ್ಯವಿದೆ. ಮಣ್ಣು ರಹಿತ ಕೃಷಿ ಮಾಡುವ ವಿಧಾನಗಳ ಬಗ್ಗೆ ಒಂದು ದಿನದ ತರಬೇತಿಯನ್ನು ಸಂಸ್ಥೆಯು ನೀಡುತ್ತಿದೆ. ಈಗಾಗಲೇ ಅನೇಕರು ತರಬೇತಿಯನ್ನು ಪಡೆದು ತಾರಸಿ ಕೈ ತೋಟವನ್ನು ಮಾಡಿದ್ದಾರೆ. ಈ ತರಬೇತಿಗೆ ಪ್ರವೇಶ ಶುಲ್ಕವಿದ್ದು, ಹೆಚ್ಚಿನ ಮಾಹಿತಿಗೆ ದೂ. 080-23086100 ಸಂಪರ್ಕಿಸಬಹುದು ಎಂದರು.



ಹೆಸರಘಟ್ಟದಲ್ಲಿ ಏರ್ಪಡಿಸಿರುವ ರಾಷ್ಟ್ರೀಯ ತೋಟಗಾರಿಕೆ ಮೇಳಕ್ಕೆ ಆಗಮಿಸಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ವಿಜ್ಞಾನಿ ಡಾ. ಕಲೈವನ್ನನ್ ಅವರು ಮಣ್ಣು ರಹಿತ ಕೃಷಿ ಕುರಿತಂತೆ ವಿವರಿಸಿದರು.

ಮಣ್ಣಿಗಿಂತಲೂ ಉತ್ತಮ ಇಳುವರಿಯನ್ನು ಪಡೆಯಬಹುದಾಗಿದೆ. ತಾರಸಿ ಮನೆಯ ತೋಟಕ್ಕೆ ಇದು ಉಪಯುಕ್ತ ತಂತ್ರಜ್ಞಾನ. ಮಹಿಳೆಯರು ತಮ್ಮ ಬಿಡುವಿನ ಸಮಯದಲ್ಲಿ ತಮ್ಮ ಮನೆಗೆ ಅಗತ್ಯವಾದ ತರಕಾರಿಗಳನ್ನು ಬೆಳೆಯಬಹುದು. ಇದಕ್ಕಾಗಿ ಅವರು ಹೆಚ್ಚಿನ ಸಮಯವನ್ನು ಮೀಸಲಿಡಬೇಕಿಲ್ಲ. ಹೆಚ್ಚು ನೀರಿನ ಅವಶ್ಯಕತೆ ಇರುವುದಿಲ್ಲ.

▪ ಡಾ.ಡಿ.ಕಲೈವನ್ನನ್, ವಿಜ್ಞಾನಿ

25-02-2023
S-karnataka Pg 07

ಅಮೆರಿಕ, ಕೊರಿಯಾ ಮುಂತಾದ ರಾಷ್ಟ್ರಗಳಿಗೆ ರಫ್ತು

ವಿದೇಶದಲ್ಲೂ ಬಾಗಲಕೋಟೆ ಮೆಣಸಿನಕಾಯಿ ಘಾಟು

• ಬಸವರಾಜ ಹವಾಲ್ದಾರ

ಬಾಗಲಕೋಟೆ: ದಾಳಿಂಬೆ, ದ್ರಾಕ್ಷಿ, ಸಪೋಟ, ಪೇರಲದಂತಹ ತೋಟಗಾರಿಕೆ ಬೆಳೆಗಳಿಂದ ಖ್ಯಾತಿ ಪಡೆದಿರುವ ಜಿಲ್ಲೆಯ ಬೆಳೆಗಳ ಪಟ್ಟಿಗೆ ಈಗ ಮೆಣಸಿನಕಾಯಿ ಸೇರ್ಪಡೆಗೊಂಡಿದೆ. ಬಾಗಲಕೋಟೆ, ಹುನಗುಂದ ತಾಲ್ಲೂಕಿನಲ್ಲಿ ಸಾವಿರಕ್ಕೂ ಹೆಚ್ಚು ರೈತರು ಬೆಳೆದ '334' ತಳಿಯ ಕೆಂಪು ಮೆಣಸಿನಕಾಯಿ ಘಾಟು ಈಗ ವಿದೇಶದಲ್ಲಿಯೂ ಹರಡಿಕೊಂಡಿದೆ.

ಈಗಾಗಲೇ 300 ಟನ್‌ನಷ್ಟು ರಫ್ತು ಮಾಡಲಾಗಿದ್ದು, ಅಂದಾಜು ಇನ್ನೂ 100 ಟನ್‌ನಷ್ಟು ರಫ್ತಾಗುವ ನಿರೀಕ್ಷೆ ಇದೆ. ಕಡಲೆ, ತೊಗರಿ ಬೆಳೆದು ಅಲ್ಪ ಆದಾಯ ಪಡೆಯುತ್ತಿದ್ದ ರೈತರು, ಈಗ ಮೆಣಸಿನಕಾಯಿ ಬೆಳೆದು ಪ್ರತಿ ಎಕರೆಗೆ ₹1 ಲಕ್ಷ ದಿಂದ ₹ 1.25 ಲಕ್ಷ ವರೆಗೆ ಆದಾಯ ಗಳಿಸುತ್ತಿದ್ದಾರೆ.

ಹುನಗುಂದ ತಾಲ್ಲೂಕಿನ ಸೂಳೇಭಾವಿಯಲ್ಲಿರುವ ಹುನಗುಂದ ತೋಟಗಾರಿಕೆ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಾಗಿರುವ ರೈತರು, ಜಿಲ್ಲೆಯ ಮೆಣಸಿನಕಾಯಿ ಘಾಟನ್ನು ಎಲ್ಲೆಡೆ ಹರಡುತ್ತಿದ್ದಾರೆ. ಸಂಸ್ಥೆ ಮೂಲಕ ವಿದೇಶಕ್ಕೂ ಕಳುಹಿಸುತ್ತಿದ್ದಾರೆ.

334 ಅಥವಾ ಸೂಪರ್ 10 ಎಂಬ ತಳಿ ಬೆಳೆಯಲಾಗುತ್ತಿದ್ದು, ಪ್ರತಿ ಎಕರೆಗೆ 10ರಿಂದ 14 ಕ್ವಿಂಟಲ್ ಇಳುವರಿ ಪಡೆಯುತ್ತಿದ್ದಾರೆ. ಪ್ರತಿ ಕ್ವಿಂಟಲ್‌ಗೆ ₹19 ಸಾವಿರದಿಂದ ₹26 ಸಾವಿರ



ಬಾಗಲಕೋಟೆ ಜಿಲ್ಲೆಯ ಚಿತ್ತರಗಿಯ ಎನ್.ಸಿ. ಗೌಡರ ಹೊಲದಲ್ಲಿನ ಮೆಣಸಿನಕಾಯಿ

ಪ್ರಜಾವಾಣಿ ವಿಶೇಷ

ವರೆಗೆ ಮಾರಾಟವಾಗಿದೆ. ಮೆಣಸಿನಕಾಯಿ ಮಾರುಕಟ್ಟೆಗಿಂತ ಪ್ರತಿ ಕ್ವಿಂಟಲ್‌ಗೆ ₹2 ಸಾವಿರದಿಂದ ₹3 ಸಾವಿರ ಹೆಚ್ಚಿಗೆ ದೊರೆಯುತ್ತಿದೆ. ಉತ್ತಮ ಬೆಲೆ ದೊರೆಯದ ಕಾರಣ ಯಾರೂ ಮೆಣಸಿನಕಾಯಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರಲಿಲ್ಲ. ಈಗ ಉತ್ತಮ ಬೆಲೆ ದೊರೆಯುತ್ತಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಮೆಣಸಿನಕಾಯಿ ಬೆಳೆಯಲು ಆರಂಭಿಸಿದ್ದಾರೆ.

'ಮೊದಲು ಕಡಲೆ, ತೊಗರಿ ಬೆಳೆಯುತ್ತಿದ್ದೆವು. ಈಗ ಪ್ರತಿ ಎಕರೆಗೆ ₹50 ಸಾವಿರದಷ್ಟು ಪೆಚ್ಚಾಗುತ್ತಿದ್ದು, 1.20 ಲಕ್ಷ ಉಳಿಯುತ್ತಿದೆ' ಎನ್ನುತ್ತಾರೆ ಹುನಗುಂದ ತಾಲ್ಲೂಕಿನ ಚಿತ್ತರಗಿಯ ರೈತ ಎನ್.ಸಿ. ಗೌಡರ.

'ಮೆಣಸಿನಕಾಯಿ ಬೀಜದಿಂದ ಹಿಡಿದು ರಾಶಿ ಮಾಡುವವರೆಗೆ ರೈತರಿಗೆ ಉತ್ಪಾದಕ ಸಂಸ್ಥೆಯಿಂದ ಮಾರ್ಗದರ್ಶನ ಮಾಡಲಾಗುತ್ತದೆ. ರೈತರ ಹೊಲಗಳಿಗೇ ತೆರಳಿ ಸಂಗ್ರಹ ಮಾಡಲಾಗುತ್ತದೆ. ಸಾಗಾಟ ವೆಚ್ಚವನ್ನೂ ಸಂಸ್ಥೆಯೇ ಭರಿಸುತ್ತದೆ' ಎನ್ನುತ್ತಾರೆ ಹುನಗುಂದ ತೋಟಗಾರಿಕಾ ರೈತ ಉತ್ಪಾದಕ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ರವಿ ಸಜ್ಜನರ.

ವೋಲಮ್ ಇನ್‌ಗ್ರಿಡಿಯಂಟ್ಸ್ ಫುಡ್ ಲಿಮಿಟೆಡ್ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಇಲ್ಲಿಂದ ಕೊಚ್ಚಿನ್‌ಗೆ ಕಳುಹಿಸಲಾಗುತ್ತದೆ. ಅಲ್ಲಿಂದ ಅಮೆರಿಕ, ಕೊರಿಯಾ, ಯುರೋಪ್ ರಾಷ್ಟ್ರಗಳಿಗೆ ರಫ್ತಾಗುತ್ತಿದೆ ಎಂದರು.

'ಯಾವ ದೇಶಕ್ಕೆ ರಫ್ತು ಮಾಡುತ್ತೇವೆ ಎನ್ನುವ ಆಧಾರದ ಮೇಲೆ ಆ ದೇಶದ ಮಿತಿ ಪ್ರಕಾರ ಔಷಧ ಬಳಕೆ ಬಗ್ಗೆ ರೈತರಿಗೆ ಮಾರ್ಗದರ್ಶನ ಮಾಡಲಾಗುತ್ತದೆ' ಎನ್ನುತ್ತಾರೆ ವೋಲಮ್ ಇನ್‌ಗ್ರಿಡಿಯಂಟ್ಸ್ ಫುಡ್ ಲಿಮಿಟೆಡ್ ಮ್ಯಾನೇಜರ್ ಸಂತೋಷ ಯರಗಂಬಳಿಮಠ.

> ರೈತರು ಸಂಘಟಿತರಾಗಿ, ತಂತ್ರಜ್ಞಾನ ಸರಿಯಾಗಿ ಬಳಸಿಕೊಂಡರೆ ಕೃಷಿಯಲ್ಲಿಯೂ ಲಾಭ ಪಡೆಯಬಹುದಾಗಿದೆ
> **ರವಿ ಸಜ್ಜನರ,** ವ್ಯವಸ್ಥಾಪಕ ನಿರ್ದೇಶಕ, ಹುನಗುಂದ ತೋಟಗಾರಿಕೆ ರೈತ ಉತ್ಪಾದಕ ಸಂಸ್ಥೆ

25-02-2023
Prajavani Pg 05

25-02-2023
V-karanataka Pg 03

ಸಾವಯವ ಕೃಷಿ ಉತ್ತೇಜನಕ್ಕೆ 228 ಕೋಟಿ ರೂ. ಖರ್ಚು



''ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರಕಾರ ಸಾವಯವ ಕೃಷಿ ಉತ್ತೇಜನಕ್ಕೆ ನಾನಾ ಯೋಜನೆಗಳಡಿ 228.80 ಕೋಟಿ ರೂ. ಖರ್ಚು ಮಾಡಿದೆ. ಸಾವಯವ ಸಿರಿ ಯೋಜನೆಯಡಿ 2021- 22ನೇ ಸಾಲಿನಲ್ಲಿ 31.22 ಕೋಟಿ ರೂ. ವೆಚ್ಚ ಮಾಡಲಾಗಿದೆ. ರಾಜ್ಯದಲ್ಲಿ 1,10,703 ಹೆಕ್ಟೇರ್ ಪ್ರದೇಶವನ್ನು ಸಾವಯವ ಕೃಷಿಗೆ ಒಳಪಡಿಸಲಾಗಿದೆ. 8 ಯೋಜನೆಗಳು ಜಾರಿಯಲ್ಲಿದ್ದು, ಈವರೆಗೆ 5,326 ರೈತರಿಗೆ ತರಬೇತಿ ನೀಡಲಾಗಿದೆ,'' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ವಿಧಾನ ಪರಿಷತ್‌ನಲ್ಲಿ ಪಿ.ಎಂ. ಮುನಿರಾಜುಗೌಡ ಪ್ರಶ್ನೆಗೆ ಉತ್ತರಿಸಿದರು.